ವ್ಯಂಗ್ಯಚಿತ್ರಗಳು ತಂದ ಜಾಗತಿಕ ಸಂಕಟ

ವಾರ್ತಾ ವಿಶ್ಲೇಷಣೆ

ಡೆನ್ಮಾರ್ಕಿನ ಬರಹಗಾರನೊಬ್ಬ ಪ್ರವಾದಿ ಮಹಮ್ಮದರ ಬಗೆಗೆ ತಾನು ಪ್ರಕಟಿಸುತ್ತಿದ್ದ ಮಕ್ಕಳ ಚಿತ್ರಪುಸ್ತಕಕ್ಕಾಗಿ ಚಿತ್ರಗಳನ್ನು ಬರೆಸಲು ಹಲವಾರು ಚಿತ್ರಗಾರರನ್ನು ಸಂಪರ್ಕಿಸಿದನು. ಪ್ರವಾದಿಯನ್ನು ಚಿತ್ರ ರೂಪದಲ್ಲಿ ಬಿಂಬಿಸುವುದು ಇಸ್ಲಾಂ ಧರ್ಮದ ನಿಯಮಕ್ಕೆ ವಿರುದ್ಧವಾದ್ದರಿಂದ ಆ ಯೋಜನೆಗೆ ಯಾರೂ ಮುಂದೆ ಬರಲಿಲ್ಲ. ಈ ಬಗೆಯ ಸ್ವ-ನಿಯಂತ್ರಣವು ಅಭಿವ್ಯಕ್ತಿ ಸ್ವಾತಂತ್ರಕ್ಕೆ ಒಳ್ಳೆಯದಲ್ಲವೆಂದು ಪರಿಗಣಿಸಿದ Jyllands-Posten ಎಂಬ ಡ್ಯಾನಿಷ್ ಭಾಷೆಯ ದಿನ ಪತ್ರಿಕೆಯ ಸಂಪಾದಕರುಗಳಲ್ಲಿ ಒಬ್ಬನಾದ Flemming Rose ಎಂಬುವವನು ಪ್ರವಾದಿ ಮಹಮ್ಮದರ ಮೇಲೆ ವ್ಯಂಗ್ಯಚಿತ್ರಗಳನ್ನು ಪ್ರಕಟಿಸಲು ೪೦ಕ್ಕೂ ಹೆಚ್ಚು ವ್ಯಂಗ್ಯಚಿತ್ರಕಾರರನ್ನು ಸಂಪರ್ಕಿಸಿದನು. ಅವರುಗಳಲ್ಲಿ ಬಹುತೇಕ ಚಿತ್ರಕಾರರು ಈ ಯೋಜನೆಯನ್ನು ತಿರಸ್ಕರಿಸಿದರಾದರೂ ಕೆಲವರು ತಮ್ಮ ಕಲ್ಪನೆಗೆ ಅನುಸಾರವಾಗಿ ವ್ಯಂಗ್ಯಚಿತ್ರಗಳನ್ನು ಬರೆದು ಕಳಿಸಿಕೊಟ್ಟರು. ಅಂತಹ ೧೨ ವ್ಯಂಗ್ಯ ಚಿತ್ರಗಳು ಮೊಟ್ಟಮೊದಲಿಗೆ ಆ ಪತ್ರಿಕೆಯಲ್ಲಿ ಸೆಪ್ಟೆಂಬರ್ ೩೦, ೨೦೦೫ರಂದು ಪ್ರಕಟವಾದವು. ಅಷ್ಟು ಮಾತ್ರವಲ್ಲ, ಕ್ರಮೇಣ ಈ ವ್ಯಂಗ್ಯಚಿತ್ರಗಳ ವಿರುದ್ಧ ವಿರೋಧ ಎಲ್ಲ ಕಡೆ ಹಬ್ಬುತ್ತಿದ್ದಂತೆ, ೫೦ಕ್ಕೂ ಹೆಚ್ಚು ರಾಷ್ಟ್ರಗಳಲ್ಲಿ, ಬಹುತೇಕ ಯುರೋಪಿಯನ್ ದೇಶಗಳಲ್ಲಿ ಈ ವ್ಯಂಗ್ಯಚಿತ್ರಗಳು ಮತ್ತೆ ಪ್ರಕಟಗೊಂಡವು. ಇದು ವಿಶ್ವಾದ್ಯಂತ ಮುಸ್ಲಿಮರಲ್ಲಿ ಆಕ್ರೋಶವನ್ನು ಮೂಡಿಸಿತು. ಹಲವಾರು ದೇಶಗಳಲ್ಲಿ ಭಾರೀ ಪ್ರದರ್ಶನಗಳು ಮತ್ತು ಗಲಭೆಗಳು ಮತ್ತು ಹಿಂಸಾಚಾರಕ್ಕೆ ಕಾರಣವಾಯಿತು.

ಡ್ಯಾನಿಷ್ ವೃತ್ತಪತ್ರಿಕೆಯನ್ನು ನಿಯಂತ್ರಿಸಲು ಡೆನ್ಮಾರ್ಕ್ ಸರ್ಕಾರ ನಿರಾಕರಿಸಿತು. ಪತ್ರಿಕೆಯ ಮಾಲಿಕರು ಕೂಡ ಕ್ಷಮಾಪಣೆಯನ್ನು ನೀಡಲು ಮುಂದೆ ಬರಲಿಲ್ಲ. ಹಿಂಸಾಚಾರದ ಜೊತೆಗೆ, ಡೆನ್ಮಾರ್ಕ್‌ನ ಡೈರಿ ಪದಾರ್ಥಗಳನ್ನು ವಿಶ್ವದಾದ್ಯಂತ ಮುಸ್ಲಿಮರು ತಿರಸ್ಕರಿಸಬೇಕು ಎಂಬ ಕೂಗೂ ಕೇಳಿಬಂತು. ಹಲವಾರು ಮುಸ್ಲಿಂ ದೇಶಗಳ ಸರ್ಕಾರಗಳು ಡೆನ್ಮಾರ್ಕ್ ಸರ್ಕಾರವು ನಿಲುವನ್ನು ಬದಲಾಯಿಸುವಂತೆ ಒತ್ತಡ ಹೇರಲಾರಂಭಿಸಿದವು. ಕಡೆಗೆ ಮನಸ್ಸಿಲ್ಲದ ಮನಸ್ಸಿನಿಂದ ಕ್ಷಮಾಪಣೆಯೂ ಬಂತು. ಆದರೆ ಆ ವೇಳೆಗೆ ಸಮಯ ಮೀರಿತ್ತು. ಇಸ್ಲಾಂ ಜಗತ್ತು ಮತ್ತು ಪಾಶ್ಚಿಮಾತ್ಯ ಜಗತ್ತಿನ ಮಧ್ಯೆ ಒಂದು ಬಗೆಯ ಸೈದ್ಧಾಂತಿಕ ಯುದ್ಧವೇ ಆರಂಭವಾಗಿಬಿಟ್ಟಿತ್ತು.

ವ್ಯಂಗ್ಯಚಿತ್ರಗಳು ಪ್ರಕಟವಾಗಿದ್ದು ೨೦೦೫ ಸೆಪ್ಟೆಂಬರ್‌ನಲ್ಲಿ ಯಾದರೂ ಜಾಗತಿಕ ಮಟ್ಟದಲ್ಲಿ ವಿರೋಧ ವ್ಯಕ್ತವಾಗಿದ್ದು ೨೦೦೬ ಜನವರಿ ತಿಂಗಳ ನಂತರವೇ. ಈ ಸಮಯದಲ್ಲಿ ಅನೇಕ ಮುಸ್ಲಿಂ ಸಂಘಟನೆಗಳು ಒಂದು ಒಪ್ಪಂದಕ್ಕೆ ಬರಲು ಪ್ರಯತ್ನಿಸಿದರೂ ಡೆನ್ಮಾರ್ಕ್‌ನ ಸರ್ಕಾರ ಮತ್ತು ವೃತ್ತಪತ್ರಿಕೆಯ ಸಂಪಾದಕರ ಅಸಹಕಾರದಿಂದ ಮತ್ತು ನಿರ್ಲಕ್ಷ್ಯದ ಮನೋಭಾವದಿಂದ ಅವೆಲ್ಲ ವಿಫಲವಾಯಿತು. ಆಗ ಅತ್ಯಂತ ಅವಹೇಳನ ಮತ್ತು ಅಪಮಾನಗಳಿಗೆ ಒಳಗಾಗಿದ್ದ ಡೆನ್ಮಾರ್ಕಿನ ಮುಸ್ಲಿಂ ಜನತೆಗೆ ತಮ್ಮ ಸಂಕಷ್ಟವನ್ನು ಹೊರ ಜಗತ್ತಿನ ಮುಂದೆ ಇಡುವುದನ್ನು ಬಿಟ್ಟು ಬೇರೆ ಮಾರ್ಗವೇ ಇರಲಿಲ್ಲ. ಇದರಿಂದ ಮುಂದೆ ತುಂಬ ಅನಾಹುತವೇ ನಡೆದು ಹೋಯಿತು.

ಪಾಶ್ಚಾತ್ಯ ಜಗತ್ತಿನ ಬುದ್ಧಿಜೀವಿಗಳು ಇತರ ಸಂಸ್ಕೃತಿಗಳ ಮತ್ತು ಸಭ್ಯತೆಗಳ ಬಗ್ಗೆ ತಳೆದಿರುವ ಕೀಳು ಭಾವನೆಯನ್ನು ಈ ಘಟನಾ ಸರಣಿ ಎತ್ತಿ ತೋರಿಸುತ್ತದೆ. ಪ್ರವಾದಿ ಮಹಮ್ಮದರ ಚಿತ್ರಗಳನ್ನು ಅಸಹ್ಯಕರವಾಗಿ ಹಾಗೂ ಇಸ್ಲಾಂ ಭಯೋತ್ಪಾದನೆಯ ಸಂಕೇತವಾಗಿ ಬಿಂಬಿಸಿರುವುದು ಯುರೋಪಿನ ಜನತೆ ಎಂತಹ ಭಯಗ್ರಸ್ತ ಮತ್ತು ಸಂಕುಚಿತ ಮನೋಭಾವದಿಂದ ನರಳುತ್ತಿದ್ದಾರೆಂಬುದನ್ನು ಸೂಚಿಸುತ್ತದೆ. ಒಂದೇ ಸಂಸ್ಕೃತಿ ಇಡೀ ವಿಶ್ವವನ್ನು ಆಳಬೇಕು ಹಾಗೂ ಅದು ಆರ್ಥಿಕ ಪರಮಾಧಿಕಾರದಿಂದ ಸಾಧ್ಯವಿದೆ ಎಂಬ ವಿಪರೀತ ಅಹಂಭಾವನೆಯೂ ಈ ಕೃತ್ಯದ ಹಿಂದೆ ಇದೆ.

ಸೈದ್ಧಾಂತಿಕ ಮತ್ತು ಬೌದ್ಧಿಕ ನೆಲೆಯಲ್ಲಿ ಮಾತ್ರ ಈ ಘರ್ಷಣೆ ಸೀಮಿತವಾಗಬೇಕಾಗಿತ್ತು. ಆದರೆ ನಂತರದ ದಿನಗಳಲ್ಲಿ ಹಿಂಸೆ ಹಾಗೂ ರಾಷ್ಟ್ರೀಯ ಆಸ್ತಿಗಳನ್ನು ಧ್ವಂಸಮಾಡುವ ವಿಪರೀತ ವರ್ತನೆಯೂ ಪ್ರಾರಂಭಗೊಂಡಿತು. ಒಂದು ಜನಾಂಗದ ಧಾರ್ಮಿಕ ನಂಬಿಕೆಗಳನ್ನು ಅಲ್ಲಗಳೆಯುವ ಮತ್ತೊಂದು ಜನಾಂಗದ ವಿರುದ್ಧ ಆಕ್ರೋಶ ಬೆಳೆಯಿತು. ವಿಚ್ಛಿದ್ರಕಾರಿ ಪಟ್ಟಬದ್ಧ ಹಿತಾಸಕ್ತಿಗಳ ಕೈವಾಡ ಈ ಗಲಭೆ ಮತ್ತು ಹಿಂಸಾಚಾರಗಳ ಹಿಂದೆ ಇದೆ ಎನ್ನುವುದು ಸುಸ್ಪಷ್ಟ.

ಈ ಬಗೆಯ ಅಹಿತಕರ ಘಟನೆಗಳು ಧರ್ಮದ ಹೆಸರಿನಲ್ಲಿ ನಡೆಯುತ್ತಿರುವುದು ಅತ್ಯಂತ ದುರದೃಷ್ಟಕರ. ನೈಜ ಧರ್ಮ ಮನಸ್ಸುಗಳನ್ನು ಒಂದುಗೂಡಿಸುತ್ತದೆಯೇ ಹೊರತು ಒಡೆಯುವುದಿಲ್ಲ. ಸ್ವಾಮಿ ವಿವೇಕಾನಂದರ ಪ್ರಕಾರ ಪ್ರತಿಯೊಂದು ಧರ್ಮವೂ ಮನುಷ್ಯನ ಶ್ರೇಷ್ಠತೆಯನ್ನು ಮತ್ತು ಆತನ ಆಂತರಿಕ ದಿವ್ಯತೆಯನ್ನು ಪ್ರತಿಪಾದಿಸುತ್ತದೆ. ಮಾನವನ ವ್ಯಕ್ತಿತ್ವವು ನಿಜವಾಗಿಯೂ ದಿವ್ಯವಾದುದು ಎಂದು ತಿಳಿದುಕೊಳ್ಳುವ ಪ್ರಕ್ರಿಯೆಯೇ ಧರ್ಮ. ಹೀಗಾಗಿ **ಮಾನವೀಯತೆ** ಮತ್ತು **ಮಾನವೀಯ ಮೌಲ್ಯ**ಗಳಾದ ಸತ್ಯ, ಅಹಿಂಸೆ, ದಯೆ ಮುಂತಾದವುಗಳೇ ಧರ್ಮದ ತಿರುಳು. ಹಾಗೆಂದೇ ಬಸವಣ್ಣನವರು ಹೇಳಿಲ್ಲವೇ?

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ
ಮುನಿಯಬೇಡ, ಅನ್ಯರಿಗೆ ಅಸತ್ಯ ಪಡಬೇಡ,
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ,
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ

ಜಗತ್ತಿಗೆ ಬೇಕಾಗಿರುವುದು ಶಾಂತಿ, ಸಹನೆ, ದಯೆಗಳೆಂಬ ವಿಶ್ವವ್ಯಾಪಕ ಮೌಲ್ಯಗಳೇ ಹೊರತು ವಿವಿಧ ಧರ್ಮಗಳ ನಂಬಿಕೆಗಳ ನಿಂದೆ ಮತ್ತು ಅಸಹನೆಗಳಲ್ಲ. ಪ್ರತಿಯೊಂದು ಧರ್ಮವೂ ಪ್ರತಿಪಾದಿಸುವ ಸತ್ಯವನ್ನು ತಿಳಿಯುವ ವೈಶಾಲ್ಯತೆಯೇ ನಮಗಿಂದು ಬೇಕಾಗಿರುವುದು.

✪